Bruhat Bengaluru Mahanagara Palike

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ನೋಡಲ್ ಅಧಿಕಾರಿ ವಾರ್ಡ್ ಸಂಖ್ಯೆ 166 ಕರೀಸಂದ್ರ, ವಾರ್ಡ್ ಕಛೇರಿ, ಬೆಂಗಳೂರು,**

---

**ವಾರ್ಡ್ ಸಂಖ್ಯೆ ೧೬೬ ಕರೀಸಂದ್ರ ವಾರ್ಡ್ ಕಛೇರಿಯಲ್ಲಿ ದಿನಾಂಕ: ೦೪-೦೬-೨೦೨೨ ರಂದು ಬೆಳಗ್ಗೆ ೧೧:೦೦ ಗಂಟೆಗೆ ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು.**

***ಹಾಜರಿದ್ದ ಅಧಿಕಾರಿಗಳು :-***

1. ಶ್ರೀ. ಪ್ರದೀಪ್ ರಾಥೋಡ್ – ಅಧ್ಯಕ್ಷರು ಮತ್ತು ನೋಡೆಲ್ ಅಧಿಕಾರಿಗಳು.
2. ಶ್ರೀ. ನವೀನ್ ಕುಮಾರ್ – ಸಹಾಯಕ ಅಭಿಯಂತರರು ಮತ್ತು ಸಂಚಾಲಕರು (ಕಿಯೋನಿಕ್ಸ್) (ವಾರ್ಡ್ 166 ಕರೀಸಂದ್ರ)
3. ಶ್ರೀ. ನರಸಿಂಹಲು – ಹಿ.ಆ.ಪ– (ವಾರ್ಡ್ 166 ಕರೀಸಂದ್ರ)
4. ಶ್ರೀ. ಕಲ್ಯಾಣ್ – ಕಿ.ಆ.ಪ (ಹೊರಗುತ್ತಿಗೆ ಆಧಾರದ ಮೇಲೆ) (ವಾರ್ಡ್ 166 ಕರೀಸಂದ್ರ)
5. ಶ್ರೀ ದಿನೇಶ್ – ಕಂದಾಯ ಪರಿವೀಕ್ಷಕರು (ವಾರ್ಡ್ 166 ಕರೀಸಂದ್ರ)
6. ಘನತ್ಯಾಜ್ಯವಸ್ತು ವಿಲೇವಾರಿ ಸೂಪರ್‌ವೈಸರ್‌ಗಳು– (ವಾರ್ಡ್ 166 ಕರೀಸಂದ್ರ)
7. ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಟ್ರಾಫಿಕ್ ಪೋಲೀಸ್ ಇಲಾಖೆ ಜಯನಗರ ಪೊಲೀಸ್ ಅಧಿಕಾರಿಗಳು.
8. 7ನೇ ಬ್ಲಾಕ್ ಜಯನಗರ ಮತ್ತು ಕಾವೇರಿನಗರ ಸಂಘ ಸಂಸ್ಥೆಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು.

------

ಮಾನ್ಯ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ ವಾರ್ಡ್ ಸಂಖ್ಯೆ 166 ಕರೀಸಂದ್ರ ರವರು ವಾರ್ಡ್ ಸಮಿತಿ ಸಭೆಗೆ ಹಾಜರಿದ್ದ ಸಮಿತಿ ಸದಸ್ಯರು

ಹಾಗೂ ಅಧಿಕಾರಿಗಳಿಗೆ ಸ್ವಾಗತ ಕೋರಿದರು. ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಈ ಹಿಂದಿನ ಸಭೆಯಲ್ಲಿ ನಡೆಯದ ವಿಷಯಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಲಾಗಿರುವಂತೆ ಸಂಬಂಧಪಟ್ಟ ಅಧಿಕಾರಿಗಳು ಕೈಗೊಂಡಿರುವ ಕ್ರಮದ ಬಗ್ಗೆ ವಾರ್ಡ್ ಸಂಖ್ಯೆ–166ರ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು ರವರಿಗೆ ಹಿಂದಿನ ಸಭೆಯಲ್ಲಿ ಚರ್ಚಿಸಲಾಗಿರುವಂತೆ ಅಧಿಕಾರಿಗಳು ಕೈಗೊಂಡಿರುವ ಕೆಲಸ ಕಾರ್ಯಗಳ ಬಗ್ಗೆ ವಿವರಿಸುವಂತೆ ಸೂಚಿಸಲಾಯಿತು.

ಹಾಗೂ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

1. **ಕೋವಿಡ್–19 ಸಂಬಂಧ ಸೋಂಕು ಹರಡುವುದನ್ನು ತಡೆಗಟ್ಟುವ ಸಂಬಂಧ ತೆಗೆದುಕೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಬಗ್ಗೆ.**

   ಅಂಬೇಡ್ಕರ್‌ನಗರ, ಕಾವೇರಿನಗರ, ಪಾರ್ಕ್‌ಗಳ ಹತ್ತಿರ ಇರುವ ಕೊಳಚೆ ಪ್ರದೇಶಗಳಲ್ಲಿ ಹಾಗೂ 30ನೇ ಅಡ್ಡರಸ್ತೆ, ಜಯನಗರ 7ನೇ ಬ್ಲಾಕ್‌ನಲ್ಲಿ ನಿಲ್ಲುವ ಕಸದ ಲಾರಿ ಹತ್ತಿರ ನೀರು ನಿಲ್ಲುವಂತಹ ಜಾಗಗಳ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಔಷಧಿ ಸಿಂಪಡಣೆಗೆ ಆದೇಶಿಸಲಾಯಿತು.

**ಕ್ರಮ: ಆರೋಗ್ಯಾಧಿಕಾರಿಗಳು (ಪದ್ಮನಾಭನಗರ)**

ಮು.ತಿ.ನೋ ...,

2. <u>ವಾರ್ಡ್ ವ್ಯಾಪ್ತಿಯಲ್ಲಿ ಒಳಚರಂಡಿ ಸಂಬಂಧಿಸಿದ ವಿಷಯಗಳ ಬಗ್ಗೆ.</u>

- ಕಾವೇರಿನಗರದ 8ನೇ, 9ನೇ ಮತ್ತು 10ನೇ ಅಡ್ಡರಸ್ತೆಗಳಲ್ಲಿ ಹಾಗೂ ಚರ್ಚ್ ಕಾವೇರಿನಗರ, ಕರೀಸಂದ್ರ ವಿಲೇಜ್‌ಗಳಲ್ಲಿ ದಿನನಿತ್ಯ ಬಿಡುವ ನೀರಿನಲ್ಲಿ ಸಮಸ್ಯೆಯಾಗಿರುತ್ತದೆ ಎಂದು ನಿವಾಸಿಗಳು ಹಾಗೂ ಸಂಘದ ಪಧಾಧಿಕಾರಿಗಳು ತಿಳಿಸಿದರು.
- 4ನೇ ಮುಖ್ಯರಸ್ತೆ ಹಾಗೂ 5ನೇ ಮುಖ್ಯರಸ್ತೆ ಕರೀಸಂದ್ರ ಇಲ್ಲಿನ ಒಳಚರಂಡಿ ಪೈಪ್‌ಗಳು ತುಂಬಾ ಹಳೇಯದಾಗಿ ಸಮಸ್ಯೆಯಾಗಿರುತ್ತದೆ. ಆದ್ದರಿಂದ ಸದರಿ ಪೈಪ್‌ಗಳು ತೆಗೆದು ಹೊಸ ಪೈಪ್‌ಗಳನ್ನು ಅಳವಡಿಸಬೇಕು ಎಂದು ಕೋರಿರುತ್ತಾರೆ. ಸದರಿ ಸಮಸ್ಯೆಯನ್ನು ಕೂಡಲೇ ಬಗೆಹರಿಸಲು BWSSB ರವರಿಗೆ ಸೂಚಿಸುವಂತೆ ಕೋರಿದರು.

**ಕ್ರಮ: ಸ.ಅ ಮತ್ತು ಸ.ಕಾ.ನಿ.ಅ(BWSSB)**

3. <u>**ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಟ್ರಾಫಿಕ್ ಪೋಲೀಸ್ ಇಲಾಖೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ.**</u>

- ವಾರ್ಡ್ ವ್ಯಾಪ್ತಿಯಲ್ಲಿ ಸಣ್ಣ–ಪುಟ್ಟ ಅಂಗಡಿಗಳು ಪಾದಚಾರಿ ಮಾರ್ಗಗಳ ಮೇಲೆ ತೆರೆದಿರುವುದರಿಂದ ಸಾರ್ವಜನಿಕ ಪಾದಚಾರಿಗಳಿಗೆ ಓಡಾಡಲು ತೊಂದರೆಯುಂಟಾಗಿರುತ್ತದೆ. ಹಾಗೂ ಇದರಿಂದಾಗಿ ಸಾರ್ವಜನಿಕರು ವಾಹನ ನಿಲುಗಡೆಯಿಂದಾಗಿ ರಸ್ತೆಯಲ್ಲಿ ಓಡಾಡಲು ಹಾಗೂ ವಾಹನ ಸಂಚಾರ ಅಡ್ಡಿಪಡಿಸಿರುವುದಾಗಿ ಸಾರ್ವಜನಿಕರು ತಿಳಿಸಿದರು.
- ಕೃಷ್ಣ ಗ್ರಾಂಡ್ ಹೋಟೆಲ್ ಮುಂಭಾಗ ವಾಹನ ನಿಲುಗಡೆಯಿಂದ ಇತರೆ ವಾಹನಗಳ ಸುಗಮ ಸಂಚಾರಕ್ಕೆ ತೊಂದರೆಯುಂಟಾಗಿರುವುದರಿಂದ ತೆಗೆಸುವಂತೆ ಸಾರ್ವಜನಿಕರು ತಿಳಿಸಿದರು.
- 32ನೇ ಅಡ್ಡರಸ್ತೆ, 4ನೇ ಮುಖ್ಯರಸ್ತೆ ಮತ್ತು 3ನೇ ಮುಖ್ಯರಸ್ತೆ, ಜಯನಗರ 7ನೇ ಬ್ಲಾಕ್‌ನಲ್ಲಿ ಡ್ರೈವಿಂಗ್ ಸ್ಕೂಲ್ ನಿಂದ ವಾಹನ ತರಭೇತಿಯಿಂದಾಗಿ ಸಾರ್ವಜನಿಕರಿಗೆ ಬೆಳಿಗ್ಗೆ Walking ಮಾಡಲು ಟ್ರಾಫಿಕ್ ಸಮಸ್ಯೆ ವಿಪರೀತವಾಗಿರುತ್ತದೆ ಎಂದು ಸಾರ್ವಜನಿಕರು ತಿಳಿಸಿದರು.
- ಬನಶಂಕರಿ ಸ್ಮಶಾನಗಳಲ್ಲಿ ಕೆಲವು ಕಿಡಿಗೇಡಿಗಳು ಮದ್ಯಪಾನ ಹಾಗೂ ಗಾಂಜ ಸೇವನೆ ಮಾಡುತ್ತಿರುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಹಾಗೂ ಸದರಿ ಪ್ರದೇಶದಲ್ಲಿ ಸುತ್ತಮುತ್ತಲು ಸುಮಾರು 10 ಸಿಸಿಟಿವಿ ಅಳವಡಿಸುವುದು ಅವಶ್ಯಕತೆ ಇರುವುದಾಗಿ ಸಾರ್ವಜನಿಕರು ತಿಳಿಸಿದರು.

ಸಂಬಂಧಪಟ್ಟ ಅಧೀಕಾರಿಗಳು ಸರ್ಕಾರದ ಹಾಗೂ ಮಾನ್ಯ ಆಯುಕ್ತರವರ ನಿರ್ದೇಶನದಂತೆ ಪಾದಚಾರಿ ವ್ಯಾಪಾರಿಗಳಿಗೆ ತೆರವುಗೊಳಿಸುವ ಸಂಬಂಧ ಸೂಕ್ತ ಪರಿಶೀಲಿಸಿ ಶೀಘ್ರ ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.

**ಕ್ರಮ: <u>ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಟ್ರಾಫಿಕ್ ಪೋಲೀಸ್</u> /**
**ಆರೋಗ್ಯಾಧಿಕಾರಿಗಳು (ಪದ್ಮನಾಭನಗರ) / ಸ.ಆ ವಾ–166.,/ಸ.ಕಾ.ನಿ.ಅ. (ಬನಶಂಕರಿ),**
**ಕಾ.ಪಾ.ಅ/ಸ.ಕಾ.ನಿ.ಅ(ವಿದ್ಯುತ್–ದಕ್ಷಿಣ) ಬಿಬಿಎಂಪಿ**

4. <u>**ವಾರ್ಡ್‌ನಲ್ಲಿ ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ಬಗ್ಗೆ.**</u>

- ಅಂಬೇಡ್ಕರ್‌ನಗರ ಮತ್ತು ಇಂಡಸ್ಟ್ರಿಯಲ್ ಪಾಯಿಂಟ್‌ಗಳಲ್ಲಿ ಡೆಬ್ರಿಸ್ ಅನ್ನು ತುರ್ತಾಗಿ ತೆಗೆಯಲು ಸೂಚಿಸಲಾಯಿತು.
- ಸಿಲ್ಟ್ ಅಂಡ್ ಟ್ರಾಕ್ಟರ್‌ಗಳು ವಾರ್ಡ್–166 ವ್ಯಾಪ್ತಿಯಲ್ಲಿ ಪ್ರತಿ ದಿನ ಡೆಬ್ರಿಸ್ ತೆಗೆಯಲು ಮುಂಚಿತವೇ ಸ್ಥಳದ ಮಾಹಿತಿ ಪಡೆದು ಕಾರ್ಯನಿರ್ವಹಿಸಲು ಸೂಚಿಸಲಾಯಿತು.
- 7ನೇ ಬ್ಲಾಕ್ ಜಯನಗರ ಮತ್ತು ಕಾವೇರಿನಗರ ಸಂಘದ ಪಧಾಧಿಕಾರಿಗಳು 6ನೇ ಅಡ್ಡರಸ್ತೆ, 1ನೇ ಮುಖ್ಯರಸ್ತೆ ಮತ್ತು ಕನಕಪುರ ರಸ್ತೆಯ ಜಂಕ್ಷನ್‌ಗಳಲ್ಲಿ ಕಸದ ಆಟೋ ಟಿಪ್ಪರ್‌ಗಳು ನಿಂತಿರುತ್ತದೆ. ಇದರಿಂದಾಗಿ ವಾಹನ ಓಡಾಟಕ್ಕೆ ಸಮಸ್ಯೆಯಾಗಿ ಟ್ರಾಫಿಕ್ ಉಂಟಾಗುತ್ತಿರುತ್ತದೆ. ಆದ್ದರಿಂದ, ಸದರಿ ಆಟೋ ಟಿಪ್ಪರ್‌ಗಳ ನಿಲುಗಡೆಯನ್ನು ಸ್ಥಳಾಂತರಿಸಲು ತಿಳಿಸಿದರು.

ಈ ಸಂಬಂಧ ವಿಚಾರಿಸಲಾಗಿ, ವಾರ್ಡ್ ವ್ಯಾಪ್ತಿಯಲ್ಲಿ ಕಸದ ಆಟೋ ಟಿಪ್ಪರ್‌ಗಳ ನಿಲುಗಡೆಗೆ ಯಾವುದೇ ಜಾಗ ನಿಗಧಿಪಡಿಸಲಾಗಿರುವುದಿಲ್ಲ. ಆದ್ದರಿಂದ ವಾರ್ಡ್ ಪಕ್ಕದಲ್ಲಿಯೇ ನಿಲುಗಡೆ ಮಾಡುತ್ತಿರುವುದಾಗಿ ಕಿರಿಯ ಆರೋಗ್ಯ ಪರಿವೀಕ್ಷಕರು ತಿಳಿಸಿದರು.

ಕಸದ ಆಟೋ ಟಿಪ್ಪರ್‌ಗಳನ್ನು ಯಾವುದೇ ಅಡಚಣೆಯಾಗದಂತಹ ರಸ್ತೆಗಳು ಯಾ ಸೂಕ್ತ ಪ್ರದೇಶದಲ್ಲಿ ನಿಲುಗಡೆ ಮಾಡಲು ಸ.ಕಾ.ನಿ.ಅ(ಘನತ್ಯಾಜ್ಯ) ರವರು ಸೂಕ್ತ ಕ್ರಮವಹಿಸಲು ಸೂಚಿಸಲಾಯಿತು.

**ಕ್ರಮ: ಸ.ಕಾ.ನಿ.ಅ (ಘನತ್ಯಾಜ್ಯ) ಹಾಗೂ ಕಿರಿಯ ಆರೋಗ್ಯ ಪರಿವೀಕ್ಷಕರು**

5. **ಇನ್ನಿತರೆ ವಿಷಯಗಳು ಅಧ್ಯಕ್ಷರ ಸೂಚನೆಯಂತೆ.**

- 8ನೇ ಅಡ್ಡರಸ್ತೆ, 28ನೇ ಅಡ್ಡರಸ್ತೆ, 17ನೇ ಡಿ, ಇ ಅಡ್ಡರಸ್ತೆ, ಮತ್ತು 1ನೇ ಎ ಮುಖ್ಯ ರಸ್ತೆಗಳಲ್ಲಿ ಮರದ ಅನಗತ್ಯ ರೆಂಬೆ ಕೊಂಬೆಗಳನ್ನು ತೆರವುಗೊಳಿಸಲು ಸೂಚಿಸಲಾಯಿತು.

**ಕ್ರಮ: ಅರಣ್ಯ ಅಧಿಕಾರಿ (ದಕ್ಷಿಣ–ಬಿಬಿಎಂಪಿ)**

- 1ನೇ ಎ ಮುಖ್ಯರಸ್ತೆ, ಜಯನಗರ 7ನೇ ಬ್ಲಾಕ್‌ನಲ್ಲಿ ಬೀದಿ ದೀಪಗಳ ಸಮಸ್ಯೆಯಾಗಿರುತ್ತದೆ ಎಂದು ಕೋರಿದ ಮೇರೆಗೆ ಸದರಿ ಬೀದಿ ದೀಪಗಳನ್ನು ಕೂಡಲೇ ಸರಿಪಡಿಸಲು ಬೆಸ್ಕಾಂ ಇಲಾಖೆಗೆ ಸೂಚಿಸಲಾಯಿತು.

**ಕ್ರಮ: ಸ.ಆ/ಸ.ಕಾ.ನಿ.ಅ (BESCOM-) ಮತ್ತು ಕಾ.ಪಾ.ಅ/ಸ.ಕಾ.ನಿ.ಅ(ವಿದ್ಯುತ್–ದಕ್ಷಿಣ) ಬಿಬಿಎಂಪಿ**

- 6ನೇ ಅಡ್ಡರಸ್ತೆ, ಜಯನಗರ 7ನೇ ಬ್ಲಾಕ್‌ನಲ್ಲಿ ಬೀದಿ ನಾಯಿಗಳ ಹಾವಳಿ ಜಾಸ್ತಿಯಾಗಿರುತ್ತದೆ ರಸ್ತೆಗಳಲ್ಲಿ ಓಡಾಡಲು ಹಾಗೂ ವಾಹನ ಸಂಚಾರ ಮಾಡಲು ಸಮಸ್ಯೆಯಾಗಿರುವುದಾಗಿ ತಿಳಿಸಿದರು.

**ಕ್ರಮ: ಉಪ ನಿರ್ದೇಶಕರು(ಪಶುಸಂಗೋಪನೆ–ದಕ್ಷಿಣ)**

ಈ ಎಲ್ಲಾ ವಿಷಯದ ಬಗ್ಗೆ ಚರ್ಚಿಸಲಾಗಿ, ಮೇಲಿನಂತೆ ಸಂಬಂಧಪಟ್ಟ ಅಧಿಕಾರಿಗಳು ಮುಂದಿನ ಸಭೆಯೊಳಗೆ ಎಲ್ಲಾ ಕೆಲಸಕಾರ್ಯಗಳನ್ನು ಕಡ್ಡಾಯವಾಗಿ ಪೂರ್ಣಗೊಳಿಸುವಂತೆ ಸೂಚಿಸಿ, ಸೂಕ್ತ ಕ್ರಮಕೈಗೊಳ್ಳುವ ನಿರೀಕ್ಷಣೆಯೊಂದಿಗೆ ಎಲ್ಲರಿಗೂ ವಂದನೆಗಳನ್ನು ಕೋರುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.



ಶ್ರೀ. ಪ್ರದೀಪ್ ರಾಥೋಡ್

ವಾರ್ಡ್ ಸಮಿತಿ ಸಂಚಾಲಕರು
ವಾರ್ಡ್ ಸಂಖ್ಯೆ 166

ವಾರ್ಡ್ ಸಮಿತಿ ಅಧ್ಯಕ್ಷರು,
ನೋಡೆಲ್ ಅಧಿಕಾರಿ ವಾರ್ಡ್ ಸಂಖ್ಯೆ 166






